Regd No M 1229 | 43rd Year | Sri 'Satyavadi' Mysore | 23—2—195

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ಬೆಂಗಳಿಗೆ 6 ಆಣೆ

ಸತ್ಯವಾದಿ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಸಾಪ್ತಾಹಿಕ — ಅಂಮನೆ ಸಿಂಸ್ಮೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ ಸೈ

ಪಾಕೀಸಾನದ ಧಾಳಿಯಿಂದ ಗಾಮಗಳ ಸಂಪರ್ಕದ ಭಂಗ

ಪೌರಸಭೆ

ಮೈಸೂರು 21 — ರಾಜಧಾನಿಯ ಪೌರಸಭೆಯ ವಿಾಟಿಂಗು 29 ನೇ ತಾರೀಖು ಶನಿವಾರ ಮಧ್ಯಾಹ್ನ 4 ಗಂಟೆಗೆ ನಡೆಯುವುದು.

ಅಪೀಮು ಸೇವನೆ ನಿಶೇಧ

ನವದೆಹಲಿ 21 — ಬಾಯಿಯಿಂದ ಅಪೀಮು ಸೇವನೆಯನ್ನು ಏಪ್ರಿಲ್ 1 ರಿಂದ ಪೂರ್ತಿ ನಿಲ್ಲಿಸಲಾಗುವುದೆಂದೂ ಆ ತಾರೀಖಿನಿಂದ ಆಬ್ಕಾರಿ ಅಂಗಡಿಗಳಲ್ಲಿ ಅದು ದೊರೆಯುವುದಿಲ್ಲವೆಂದೂ ಇದರ ಸೇವನೆ ಬಗ್ಗೆ ರಿಜಿಸ್ಟರಾಗಿರುವವರು ವೈದ್ಯಕೀಯ ಸರ್ಟಿಫಿಕೇಟಿನ ಮೇಲೆ ಪಡೆಯಲು ಅವಕಾಶವಿದೆ ಎಂದೂ ಅಧಿಕೃತ ಪ್ರಕಟಣೆ ತಿಳಿಸುತ್ತದೆ.

ಅಂಗೀಕಾರ

ನವದೆಹಲಿ 20— ಭಾರತ ರಾಷ್ಟ್ರಾಧ್ಯಕ್ಷರು ಕೇಂದ್ರದ 1957 ರ ಶಿಕ್ಷಣ ಮಸೂದೆಗೆ ನಿನ್ನೆ ಅಂಗೀಕಾರವಿತ್ತಿರುವರು.

ಮುದ್ರಿಕ ವಸ್ತುಗಳ ಮೌಲ್ಯ

ಲಂಡನ್ — 1958 ರಲ್ಲಿ ಅಮೇರಿಕಾ ಮಾಡಲಾದ ಮುದ್ರಿಕ ಮೌಲ್ಯ 115 ರಿಂದ 125 ದಶ ಅಧಿಕ ಮಟ್ಟವನ್ನು ದೇಶವನ್ನು ವಾಣಿಜ್ಯ ಮಾಡಿದೆ.

ಅನಾಯುತ

ಬಾಂಬಾಯಿ 21 — ಜಾಲಾರಿ ಪ್ರತಿದ್ದ ಯಾತ್ರಾ ವಿಶೇಷ ಲಾ ಅಂಧೇರಿ-ಮಾಂಬಳಂದ ದೆವಾಲಯಕ್ಕೆ ಬರುತ್ತಿದ್ದ 7 ಸ್ಯಾಮಾಜಿಕರು ಕೆಲಸಗಾರರು ಗಾಯಗೊಂಡಿದ್ದಾರೆ.

ಕರೀಂಗಂಜ್ 22 — ಪಾಕಿಸ್ತಾನ ಸೇನೆಗಳಿಂದ ಎಡಬಿಡದೆ ನಡೆಯುತ್ತಿರುವ ಭೀಕರ ಮೆಷಿನ್ ಗನ್ ಧಾಳಿಯಿಂದ ಕೆಲವು ಗ್ರಾಮಗಳಿಗೆ ಸಂಪರ್ಕ ಕಡಿದು ಹೋಗಿದೆ ಹರ್ತಿಕಿತಿಲ್ಲ ಪ್ರೇಲೆ ಪಾಕಿಸ್ತಾನ ಭೀಕರ ಧಾಳಿ ಮಾಡುತ್ತಿದೆ. ಗಡಿ ಸುತ್ತಲೂ ಪಾಕಿಸ್ತಾನ ಧಾಳಿ ನಡೆಸುತ್ತಿದೆ

ರಹಸ್ಯ ಮಾತುಕತೆ

ಮಾಸ್ಕೊ 22 — ಇಲ್ಲಿಗೆ 50 ಮೈಲಿಗಳ ದೂರವಿರುವ ಮಂಜು ಆವೃತ ಸ್ಪೀಷ್‌ನಲ್ಲಿ ಬ್ರಿಟಿಷ್ ಪ್ರಧಾನಿ ಹೆರಾಲ್ಡ್ ಮ್ಯಾಕ್ಮಿಲನ್ ಮತ್ತು ರಷ್ಯದ ಪ್ರಧಾನಿ ನಿಕಿಟಾ ಕ್ರುಶ್ಚೇವರು ಮಾತುಕತೆ ರಹಸ್ಯವಾಗಿ ನಡೆಸಿದರು

ಪ್ರದರ್ಶನ ಆರಂಭ

ಬೆಂಗಳೂರು 22 — ಅಖಿಲ ಭಾರತ ಜಾನುವಾರು ಪ್ರದರ್ಶನವನ್ನು ಕೇಂದ್ರ ಕೈಗಾರಿಕಾ ಮಂತ್ರಿ ಶ್ರೀ ಲಾಲ ಬಹದ್ದೂರ್ ಶಾಸ್ತ್ರಿ ಈ ದಿನ ಆರಂಭಿಸುತ್ತ, ಉತ್ತಮ ಪಶುಸಂರಕ್ಷಣೆಯಿಂದ ಉತ್ತಮ ವ್ಯವಸಾಯ, ಉತ್ತಮ ವ್ಯವಸಾಯದಿಂದ ಉತ್ತಮ ವಾಣಿಜ್ಯ ಮತ್ತು ಉತ್ತಮ ಕೈಗಾರಿಕೆ ಉಂಟಾಗುವುದು ಎಂದರು

ಪುಸ್ತಕ ಪ್ರಕಟಣೆ

ಮಾಸ್ಕೊ 10 — ಸೋವಿಯಟ್ ಇತಿಹಾಸಕಾರರಾದ ಓಲೆಗ್ ಸೋಲೊವ್ಯೇವರು ಬರೆದ 'ರಷ್ಯಾ-ಭಾರತ ಸಂಬಂಧಗಳ ಇತಿಹಾಸ' ವೆಂಬ ಪುಸ್ತಕವು ಈಗಿಲ್ಲಿ ಪ್ರಕಟವಾಗಿದೆ.

ಮಧುರಾ 22 — ಟ್ಯೂಟಿಕಾರ್ಪ್ ನಲ್ಲಿ ಮುತ್ತಿನ ವಿಾನುಗಳ ಪತ್ತೆಗೆ ಹೊರಟ 35 ವರ್ಷದವನೋರ್ವನು ಮುಳುಗಿ ಸತ್ತನು.

ನೆಹರು ಭಾಷಣ

ಮಾರ್ಚ್ 1 ನೇ ತಾ|| ಲಕ್ನೋವಿನಲ್ಲಿ ಪಂ|| ನೆಹರು ಉತ್ತರ ಪ್ರದೇಶದ ಶಾಸನ ಸಭೆ ಕಾಂಗ್ರೆಸು ಪಕ್ಷದ ಸದಸ್ಯರುದ್ದೇಶಿಸಿ ಭಾಷಣಮಾಡುತ್ತಾರೆ

ವಿದ್ಯಾರ್ಥಿ ಕೇಂದ್ರ

ಮಾಂಟ್ರೀಲ್ 22 — ಅಂತರರಾಷ್ಟ್ರ ವೈ ಎಂ ಸಿ ಎ ಕಟ್ಟಡದ ನಿಧಿಯಲ್ಲಿ ಬೆಂಗಳೂರಿನಲ್ಲಿ ವಿದ್ಯಾರ್ಥಿ ಕೇಂದ್ರ ನಿರ್ಮಿಸುವ ಸೂಚನೆ ಇದೆ

ಪ್ರದರ್ಶನದಲ್ಲಿ ಪ್ರಾಣಿಗಳು

ಬೆಂಗಳೂರು 22 — ಸುಭಾಷ ನಗರದಲ್ಲಿ ಆರಂಭವಾದ ಪಶು ಪ್ರದರ್ಶನದಲ್ಲಿ 1 ಸಾವಿರ ಪಶುಗಳು, 1 ಸಾವಿರ ಕೋಳಿಗಳು ಮತ್ತು 60 ಕುರಿಗಳು ಮತ್ತು ಕುದುರೆಗಳು ಇವೆ

ಡಲೆಸ್ ಪರಿಸ್ಥಿತಿ

ವಾಷಿಂಗ್ಟನ್ 22 — ಅಮೇರಿಕಾ ಸಂಸ್ಥಾನದ ಕಾರ್ಯದರ್ಶಿ ಡಲೆಸ್‌ರಿಗೆ ರೇಡಿಯಂ ಔಷಧವನ್ನು ಪ್ರಯೋಗಿಸಿದ್ದರಿಂದ ಯಾವ ಗುಣದೋಷಗಳು ಕಂಡು ಬಂದಿಲ್ಲ

ಕೃತಜ್ಞತೆ

ನ್ಯೂ ಯಾರ್ಕ್ — 60 ವರ್ಷಕ್ಕೂ ಹಿಂದೆ 200 ಡಾಲರುಗಳ ವಿದ್ಯಾರ್ಥಿವೇತನವನ್ನು ನೀಡಿದುದಕ್ಕೆ ಕೃತಜ್ಞತೆಯಾಗಿ ಕೊಲಂಬಿಯಾ ವಿಶ್ವವಿದ್ಯಾನಿಲಯದ ಪದವೀಧರರೊಬ್ಬರು 5 ದಶಲಕ್ಷ ಡಾಲರುಗಳನ್ನು ವಿುಕ್ಕುವ ಆದರೆ 10 ದಶಲಕ್ಷಕಿಂತ ಕಮ್ಮಿಯಾದ ಮೊತ್ತವನ್ನು ಆ ವಿಶ್ವವಿದ್ಯಾನಿಲಯಕ್ಕೆ ದಾನ ಮಾಡಿದ್ದಾರೆ.

ಆಜಾದರ ಸ್ಮರಣೆ

ನವ ದೆಹಲಿ 22 — ಮೌಲಾನಾ ಆಜಾದರ ಮರಣದ ವಾರ್ಷಿಕ ದಿನಾಚರಣೆಯಲ್ಲಿ ಭಾರತದ ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಭಾಷಣಮಾಡುತ್ತ, ಆಜಾದರು ಈಗ ಹಾಗೂ ಮುಂದಿನ ಭಾರತದ ಜನತಾಂಗಕ್ಕೆ ಸ್ಫೂರ್ತಿದಾಯಕರು ಎಂದಿರುವರು

ಕೆಚ್ಚಾ ಫಿಲಂ ಕಾರ್ಖಾನೆ

ಬೆಂಗಳೂರು 22 — ಮತ್ತೊಂದು ಕಚ್ಚಾ ಫಿಲಂ ಕಾರ್ಖಾನೆಯನ್ನೇನಾದರೂ ಸ್ಥಾಪಿಸುವುದಾದರೆ ಅದನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡಲಾಗುವುದಾಗಿ ಕೇಂದ್ರ ಮಂತ್ರಿ ಶ್ರೀ ಲಾಲ ಬಹದ್ದೂರ್ ಶಾಸ್ತ್ರಿ ತಿಳಿಸಿದ್ದಾರೆ

ಬೆಳಗಾಂ 21 — ಮಾರ್ಷಲ್ ತಿಯವರ ಗಡಿ ಸತ್ಯಾಗ್ರಹದಲ್ಲಿ ಬೆಳಗಾಂ ಪೋಲೀಸರ ವರ್ತನೆಯನ್ನು ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿ ಪ್ರಶಂಸಿಸಿರುವರು

ನವ ದೆಹಲಿ 22 — ವಿವಿಧ ಕೈಗಾರಿಕೆಗಳಲ್ಲಿ ಉತ್ಪಾದನೆ ಏರಿಕೆ ಮಾಡಲು ರಾಷ್ಟ್ರೀಯ ಉತ್ಪಾದನಾ ಸಮಿತಿ ನಿರ್ಧರಿಸಿದೆ.

ದಿವ್ಯವಾಣಿ

ಮಾಯೆಯೆಂಬ ಮೋಸಗಾತಿಯು ಪ್ರಪಂಚವನ್ನೆಲ್ಲಾ ಮೋಸಗೊಳಿಸುತ್ತಾ ತಿರುಗುತ್ತಿರುತ್ತಾಳೆ, ಇಂತಹ ಮೋಸಗಾತಿಗೆ ಮಹತ್ಕನೆಂಬುವನಿಗೆ ನನ್ನ ಪ್ರಣಾಮವಿರಲಿ !

ನಾಳೆಯ ಪಂಚಾಂಗ

ಶ್ರೀ ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
24 ಪ್ರಥಮ ಪುಟ್ಟ

ವಿವಿಧ ವರ್ತಮಾನ

ಮಾಸ್ಕೋ 21— ಇಲ್ಲಿಗೆ ಆಗಮಿಸಿದ ಬ್ರಿಟಿಷ್ ಪ್ರಧಾನಿ ಮೆಕ್ಮಿಲನ್ನರಿಗೆ ಸುಸ್ವಾಗತ ದೊರೆಯಿತು — ಬಂದ 2 ಗಂಟೆಗಳ ನಂತರ ಅವರು ರಷ್ಯಾ ಪ್ರಧಾನಿ ಕೃಶ್ಚೇವರೊಂದಿಗೆ ಪ್ರಾಥಮಿಕ ಮಾತುಕತೆ ನಡೆಸಿದರು.

ಮಾಸ್ಕೊ 21— ಯುದ್ಧದ ಅಪಾಯವನ್ನು ಕಡಮೆಗೊಳಿಸುವುದೇ ರಾಜ ಕೀಯವೇತ್ತರ ಕರ್ತವ್ಯವೆಂದು ಬ್ರಿಟಿಷ್ ಪ್ರಧಾನಿ ಮೆಕ್ಮಿಲನರು ಹೇಳಿದರು.

ಲಂಡನ್ 21— ಮಾಸ್ಕೋಗೆ ಹೋಗಲು ವಿಮಾನ ಹತ್ತುವಾಗ, ಪ್ರಧಾನಿ ಮೆಕ್ಮಿಲನ್ನರು ಪತ್ರಿಕೆಯವರನ್ನು ಕುರಿತು ' ನಾನು ರಷ್ಯಾಕ್ಕೆ ಹೋಗುವುದು ಅಲ್ಲಿಯ ರಹಸ್ಯವನ್ನು ಬೇಧಿಸಲು ಅಲ್ಲ, ರಷ್ಯಾ ನಾಯಕರ ಮನಸ್ಸು ಮತ್ತು ಹೃದಯವನ್ನು ಶೋಧಿಸಲೂ ಮತ್ತು ಅವರೊಡನೆ ಎಷ್ಟರಮಟ್ಟಿಗೆ ಸೇರಬಹುದು ಎಂಬುದನ್ನು ಅರಿಯಲೂ ಹೋಗುತ್ತಿರುವೆ ' ನೆಂದು ತಿಳಿಸಿದರು.

ನವದೆಹಲಿ 1958 ನೇ ಏಪ್ರಿಲ್ 1 ರಿಂದ ಹೆಚ್ಚು ಆಹಾರ ಬೆಳೆಯಿರಿ ಕಾರ್ಯಕ್ರಮದಲ್ಲಿ ರಾಜ್ಯಗಳು ಮತ್ತು ಕೇಂದ್ರ ಸರಕಾರದ ಭಾಗಗಳಿಗೆ ಒಟ್ಟು 833 64 ಲಕ್ಷ ರೂಗಳು ಕೊಡಲಾಗಿದೆಯೆಂದು ಪ್ರಕಟವಾಗಿದೆ

ಲಕ್ನೋ 21— ನಮ್ಮ ಸರಕಾರವು ಅಮೇರಿಕಾ ಮತ್ತು ರಷ್ಯಾವನ್ನು ಅನುಕರಿಸುತ್ತಾ, ದೊಡ್ಡ ಪ್ರಾಜಕಲ್ಪಗಳಿಗಾಗಿ ಹಣವನ್ನು ದುಂದು ಮಾಡುತ್ತಿರುವುದೆಂದು ಶಾಸನಸಭೆಯಲ್ಲಿ ವಿರೋಧಪಕ್ಷದ ಸೋಷಲಿಸ್ಟ್ ನಾಯಕ ರಾಜಾ ನಾರಾಯಣ್ ಆಪಾದಿಸಿದರು.

ನಬಾಡಲಿಪ್ (ಪಶ್ಚಿಮ ಬಂಗಾಳ)— ಅಂವಿಂದರವರ ಅವಶೇಷವು ಒಂದು ಸ್ಪೆಷಲ್ಲಾಗಿ ಕಟ್ಟಲ್ಪಟ್ಟ ದೇವಾಲಯದಲ್ಲಿ, ಆಹಾರ ಮಂತ್ರಿ ಸೆಕ್ಕರವರಿಂದ ಇಡಲ್ಪಟ್ಟಿತು.

ಬೊಂಬಾಯಿ 21— ಡಾ|| ಎ ಡಿ ಸವಾರ್ಕರರಿಗೆ ನಾಸಿಕ್ ಖೂನಿ ಮತ್ತು ಪಿಕೂರಿ ವೊಖದ್ದನೆಯಲ್ಲಿ ಶಿಕ್ಷೆ ವಿಧಿಸಲ್ಪಟ್ಟನಂತರ, ಆಗಿದ್ದ ಪರಕೀಯ ಸರಕಾರದ ಇಚ್ಛೆಯಂತೆ, ಬೊಂಬಾಯಿ ವಿಶ್ವವಿದ್ಯಾನಿಲಯವು ಅವರಿಗೆ ಇತ್ತಿದ್ದ ಬಿ. ಎ. ಪ್ರಶಸ್ತಿಯನ್ನು ವಾಪಸ್ಸು ಪಡೆಯಿತು ; ಮತ್ತೆ ಆ ಪ್ರಶಸ್ತಿಯನ್ನು ಅವರಿಗೆ ಕೊಡುವ ವಿಷಯವನ್ನು ಬೊಂಬಾಯಿ ವಿಶ್ವವಿದ್ಯಾನಿಲಯವು ಪರ್ಯಾಲೋಚಿಸುತ್ತಿರುವುದಾಗಿ ತಂದಿಯಾಗಿದೆ.

ಲಂಡನ್ 21— ಪೂರ್ವ ಲಂಡನ್ನಿನ ಬೈನಾಟೋಕ್ ಜೆಲ್ಲೆಯಲ್ಲಿ ವಾಸಿಸುತ್ತಿದ್ದ ಜಾಕಿ ಪುಲ್ಲಂಬಾರ್ ನು 4 ದಿನಗಳ ಹಿಂದೆ ಸತ್ತುಹೋದನು ; ಇವನೊಬ್ಬ ವಾಚ್ಮೆನ್ನನಾಗಿದ್ದು ಖರ್ಚಿಗೆ ಸಾಲದೆ ಆಹಾರಕ್ಕಾಗಿ ಭಿಕ್ಷಬೇಡುತ್ತಿದ್ದನು; 20 ವರ್ಷಗಳಿಂದ ಒಂದೇ ಕೋಟು ಒಂದೇ ಟೋಪಿ ಧರಿಸುತ್ತಿದ್ದನು ; ಅವನ ಕೊಪಡಿಯನ್ನು ಪೋಲೀಸರು ಶೋಧಿಸಲಾಗಿ 1300 ಪೌಂಡುಗಳ ಡಿಪಾಜಿಟ್ಟುಳ್ಳ ಪೋಸ್ಟಾಫೀಸು ಸೇವಿಂಗ್ಸ್ ಪುಸ್ತಕವೂ, ಕ್ಯಾಷ್ 2000 ಪೌಂಡೂ ದೊರೆತವು

ಗೋಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ ಅಂಚೆವೆಚ್ಚಕ್ಕಾಗಿ 5 ಆಣೆ

ಪೋಷಕರು ರೂ 25, ಬೆಂಬಲಿಗರು ರೂ 10 (ಒಂದೇಸಾರಿ) ಮಾತ್ರ

ಗೋಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು

Printed & Published by Dharma Prachara Niraia M S Ramarao Rao at the Satyavadi Press Chamarajapuram, Mysore

ವುಡ್‌ಲಾಂಡ್ಸ್ ಕೀರ್ತಿಯುತ 4 ನೇ ವಾರ

.... ಸಹಸ್ರಾರು ಮಂದಿ ನೋಡಿ ಆನಂದಿಸುತ್ತಿರುವ ಚಿತ್ರರತ್ನ ....

ದಿಲ್ಲೀ – ಕ – ಥಗ್ (ಹಿಂದಿ)

ತಾರಾಗಣ– ನೂತನ್, ಕಿಶೋರ್, ಸ್ಮೃತಿಬಿಸ್ವಾಸ್ | ದಿನ 3 ಪ್ರದರ್ಶನಗಳು

ಸಂಗೀತಪೂರ್ಣ ಹಾಸ್ಯಮಯ ಚಿತ್ರ — ನೀರಜ ನೃತ್ಯಗಳು ಗೀವಾಕಲರಿನಲ್ಲಿ

ಅಪೆರಾ— 21–2–59 ರಿಂದ

ಕುರುಪಿನ್ ಜ್ಯೋತಿ

ಅಂಜಲಿದೇವಿ, ನಾಗೇಶ್ವರರಾವ್, ರಂಗರಾವ್ ಪಾತ್ರವಹಿಸಿರುವರು

ಅಮೋಘ ತಮಿಳು ಚಿತ್ರ — — ಪ್ರತಿದಿನ 3 ಆಟಗಳು

Sri ' SATYAVADI ' Daily

Oldest Newspaper in the State ; Splendid Advertiser

Advertisement Tariff

Casual	Rs 1-50 per inch
2 insertions and above	1-25
Contract above 100 inches	1-00
500	0-75

Column length 12½ inches ; width 2 inches; 4 columns to a page
The decision of the management is final in all matters.

Manager " Satyavadi ", Chamarajpuram, Mysore

ನೀಲಗಿರಿ ಬೆಟ್ಟಗಳಲ್ಲಿ ವಾಸಿಸುತ್ತಿರುವ ಗುಡ್ಡ ನಾಡಿನ ಹೆಂಗಸು ಹೊಲಿಗೆಯಂತ್ರವನ್ನು ಉಪಯೋಗಿಸುವುದನ್ನು [illegible]